# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 147/2019

**ಪಿಡಬ್ಲ್ಯೂ 2**

**ಸಾಕ್ಷಿಯನ್ನು ದಿನಾಂಕ 21.03.2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಬಿ.ಕೆ.ಎನ್ 1 ನೇ ಪ್ರತಿವಾದಿ ಪರ ವಕೀಲರುಃ**

ನನ್ನ ತಂದೆ ಮೃತಪಟ್ಟ ನಂತರ ಹಾಗೂ ನಾವು ಹೆಣ್ಣುಮಕ್ಕಳು ಗಂಡಂದಿರ ಮನೆಯಲ್ಲಿ ಇರುವ ಕಾರಣ ನಮ್ಮ ಕುಟುಂಬದ ನಿರ್ವಹಣೆಯನ್ನು 4 ನೇ ವಾದಿ ಮಾಡುತ್ತಿದ್ದರು ಎಂದರೆ 4 ನೇ ವಾದಿ ಹಾಗೂ ನನ್ನ ತಾಯಿ ಇಬ್ಬರು ನಿರ್ವಹಣೆ ಮಾಡುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಮನೆಯಲ್ಲಿ ಹಣದ ವ್ಯವಹಾರವನ್ನು 4 ನೇ ವಾದಿ ಮಾಡುತ್ತಾರೆ ಎಂದರೆ ಸಾಕ್ಷಿಯು 4 ನೇ ವಾದಿ ಹಾಗೂ ನನ್ನ ತಾಯಿ ಇಬ್ಬರು ಮಾಡುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ತಂದೆ ಈ ಹಿಂದೆ ನೀಡದ್ದ ಸಾಲವನ್ನು ವಸೂಲಿ ಮಾಡುವುದು 4 ನೇ ವಾದಿ ಎಂದರೆ ಸಾಕ್ಷಿಯು ನಮ್ಮ ಕುಟುಂಬದವರೆಲ್ಲರೂ ಸೇರಿ ಒಟ್ಟಾಗಿ ಮಾಡುವುದು ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಹಣದ ವಸೂಲಿಯನ್ನು ಮಾಡಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ದಾವೆಯನ್ನು ಹೂಡಿದ ನಂತರ ಪ್ರತಿವಾದಿಗಳು ಅಸಲು ಮತ್ತು ಬಡ್ಡಿ ಹಣವನ್ನು 4 ನೇ ವಾದಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ನನ್ನ ತಮ್ಮ 4 ನೇ ವಾದಿಯಿಂದ ಕೇಳಿ ತಿಳಿದುಕೊಂಡಿದ್ದೇನೆ. 1 ನೇ ಪ್ರತಿವಾದಿ 4 ನೇ ವಾದಿಗೆ ಎಷ್ಟು ಅಸಲು ಮತ್ತು ಬಡ್ಡಿ ಹಣವನ್ನು ನೀಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

3. ಪ್ರತಿವಾದಿಗಳು 2,10,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರು. ಸಾಕ್ಷಿ ಮುಂದುವರೆದು 2 ಲಕ್ಷ ತೆಗೆದುಕೊಂಡಿದ್ದಾರೆ 10 ಸಾವಿರ ಬಾಕಿ ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ 1 ನೇ ಪ್ರತಿವಾದಿ ತನ್ನ ಬಳಿ ಸಾಲ ಪಡೆದಿದ್ದಾರೆ ಎಂದು ನನಗೆ ತಿಳಿಸಿದ್ದರು. ಬಡ್ಡಿಯ ಬಗ್ಗೆ ನನಗೆ ತಿಳಿಸಿಲ್ಲ. 4 ನೇ ವಾದಿಯನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ಮಾಡಿಸಲು ತೊಂದರೆ ಇಲ್ಲ.

4. ಈ ಹಿಂದೆ ನನ್ನ ತಂದೆ ಕೆ.ಆರ್.ನಗರ ನ್ಯಾಯಾಲಯದಲ್ಲಿ ಹಣ ವಸೂಲಾತಿಗಾಗಿ ಹೂಡಿದ್ದರು ಎಂದರೆ ಕೆಲವು ಮಾತ್ರ ಗೊತ್ತಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಅವರುಗಳ

ಹೆಸರುಗಳು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪುಟ್ಟಸ್ವಾಮಿ ಅವರದ್ದು ಒಂದು ಪ್ರಕರಣ ಮತ್ತೊಂದು ಪ್ರಕರಣದ ಪಕ್ಷಗಾರರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ನನ್ನ ತಂದೆ ಪ್ರತಿವಾದಿಗೆ ದಿಃ 18.05.2016 ರಂದು ಹಣವನ್ನು ನೀಡಿದ್ದಾರೆ. ನನ್ನ ತಂದೆ 1 ನೇ ಪ್ರತಿವಾದಿಗೆ ಹಣ ನೀಡುವಾಗ ನಾನು ಮನೆಯಲ್ಲಿರಲಿಲ್ಲ. ಹಣವನ್ನು ಕೆ.ಆರ್.ನಗರದಲ್ಲಿ ನೀಡಿದ್ದಾರೆ. ಹಣ ನೀಡುವಾಗ 1 ನೇ ಪ್ರತಿವಾದಿಯ ಜೊತೆ 2 ರಿಂದ 4 ನೇ ಪ್ರತಿವಾದಿಗಳು ಇದ್ದರು. ಸಾಕ್ಷಿದಾರರಾದ ದೇವರಾವ್ ಬಾವಲೆ ಮತ್ತು ರಾಮಚಂದ್ರ ರಾವ್ ಎಂಬುವವರು ಇದ್ದರು. ಸಾಕ್ಷಿದಾರರು ಯಾರು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ನಿಪಿ 11 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

6. ನಿಪಿ 1 ನ್ನು ಚಂದ್ರಶೇಖರವರು ಬರೆದಿರುತ್ತಾರೆ. ನಿಪಿ 11 ನನ್ನ ತಂದೆ ಮಾಡುತ್ತಿದ್ದ ಅಕ್ರಮ ಬಡ್ಡಿ ವ್ಯವಹಾರಕ್ಕಾಗಿ ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. 2016 ರಲ್ಲಿ 1 ನೇ ಪ್ರತಿವಾದಿ ನನ್ನ ತಂದೆಯಿಂದ 1 ಲಕ್ಷ ಸಾಲವನ್ನು ಪಡೆದಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಅವರಿಗೆ 2 ಲಕ್ಷ ಸಾಲದ ಹಣ ಕೊಟ್ಟಿದ್ದರು ಎಂದರೆ 2 ಲಕ್ಷ ಕೊಟ್ಟಿದ್ದರು ಇನ್ನೂ 10 ಸಾವಿರ ಬಾಕಿ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಬಡ್ಡಿ ವ್ಯವಹಾರಕ್ಕಾಗಿ 1 ಲಕ್ಷಕ್ಕೆ 2 ರೂ ಬಡ್ಡಿಯಂತೆ ನನ್ನ ತಂದೆ 1 ನೇ ಪ್ರತಿವಾದಿಗೆ ಹಣ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಮೀನು ತೆಗೆದುಕೊಳ್ಳಲು ನನ್ನ ತಂದೆ 1 ನೇ ಪ್ರತಿವಾದಿಗೆ ಹಣ ನೀಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ 1 ನೇ ಪ್ರತಿವಾದಿಗೆ 1 ಲಕ್ಷ ರೂಪಾಯಿ ಹಣವನ್ನು ಬಡ್ಡಿಗಾಗಿ ಮಾರಗೌಡನಹಳ್ಳಿಯ ಜಯಣ್ಣ, ನಾಗಣ್ಣ ಬಿನ್ ಬಸಪ್ಪ ರವರ ಸಮಕ್ಷಮ ನೀಡಿರುತ್ತಾರೆ ಎಂದರೆ ಸರಿಯಲ್ಲ.

7. 2017 ರಲ್ಲಿ 1 ಲಕ್ಷ ಸಾಲದ ಹಣಕ್ಕೆ 20 ಸಾವಿರ ಬಡ್ಡಿಯನ್ನು 1 ನೇ ಪ್ರತಿವಾದಿಗೆ ನನ್ನ ತಂದೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆಯಲ್ಲಿ ಇರುವ ಕಾರಣ ಬಡ್ಡಿ ಹಣವನ್ನು ನೀಡಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿದು, ಮುಂದುವರೆದು ಸಾಕ್ಷಿಯು ಬಡ್ಡಿ ಹಣ ಪಡೆದಿದ್ದರೆ ನನ್ನ ತಂದೆ ನನಗೆ ತಿಳಿಸುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

8. ನನ್ನ ತಂದೆ ಏಪ್ರಿಲ್ 2018 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ದಾವಾ ಆಸ್ತಿ ಕಬಳಿಸಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ಸಾಲದ ಹಣದ ಬಡ್ಡಿಯನ್ನು ಕೊಡಲು 1 ನೇ ಪ್ರತಿವಾದಿ 4 ನೇ ವಾದಿ ಬಳಿ ಹೋದಾಗ ಅದನ್ನು ಅವರು ತಿರಸ್ಕರಿಸಿ ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

9. ದಾವಾ ಸ್ವತ್ತಿನ ವಿಸ್ತೀರ್ಣ 2 ಎಕರೆ ಒಂದೂವರೆ ಗುಂಟೆ ಇದೆ. ಅದರ ಸ.ನಂ.50 ಮತ್ತು 55. ಸ.ನಂ.50 ಮತ್ತು 55 ರಲ್ಲಿ ಎಷ್ಟು ಆಸ್ತಿ ಇದೆ ಎಂದು ಪ್ರತ್ಯೇಕವಾಗಿ ಗೊತ್ತಿಲ್ಲ ಆದರೆ ಒಟ್ಟು 2 ಎಕರೆ ಒಂದೂವರೆ ಗುಂಟೆ ಇದೆ. ದಾವಾ ಸ್ವತ್ತು ಖಾಲಿ ಭೂಮಿ. ದಾವಾ ಸ್ವತ್ತನ್ನು ನಾನು ನೋಡಿಲ್ಲ. ಅದರಲ್ಲಿ ಬೋರವೆಲ್ ಇದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ತೆಂಗಿನಮರಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ವರ್ಷಕ್ಕೆ 2 ಲಕ್ಷ ಆದಾಯ ಪಡೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ